# ಹತ್ತನೇ ತರಗತಿ ಮಾದರಿ ಪ್ರಶ್ನೆ ಪತ್ರಿಕೆ (2)
# ಕನ್ನಡ ದ್ವಿತೀಯ ಭಾಷೆ
# ಪ್ರಶ್ನೆ ಪತ್ರಿಕೆ

**ಗರಿಷ್ಠ ಅಂಕ : ೮೦** **ಅವಧಿ : 2–30 ಗಂಟೆಗಳು**

**ಸೂಚನೆಗಳು :**

- **ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.**
- **ವಿಭಾಗ 'ಎ' ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 53 ಅಂಕಗಳು**
- **ವಿಭಾಗ 'ಬಿ' ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು 12 ಅಂಕಗಳು**
- **ವಿಭಾಗ 'ಸಿ' ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ 15 ಅಂಕಗಳು**
- **ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಬೇಕು**
- **ವಸ್ತುನಿಷ್ಠ ಪ್ರಶ್ನೆಗಳಿಗೆ ಹೊಡೆದು, ಅಳಿಸಿ, ಕೆರೆದು ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.**
- **ಪೆನ್ಸಿಲ್ ಬಳಸಿ ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.**

## ಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 53 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದ ಉತ್ತರವನ್ನು ಬರೆಯಿರಿ.** **8X1=8**

1. ವಿಷ ಸವರಿದ ಬಾಣವನ್ನು ಬೇಡನು ಏಕೆ ಸಿದ್ಧ ಮಾಡಿಕೊಂಡಿದ್ದನು?
2. 'ಗೋಡೆ' ಎಂಬ ಅನ್ವರ್ಥ ನಾಮದಿಂದ ಪ್ರಸಿದ್ಧರಾಗಿರುವ ಕ್ರಿಕೆಟ್ ಆಟಗಾರ ಯಾರು?
3. ಅಜ್ಜನು ಸರ್ಕಾರದ ಕಾಯಿದೆಯನ್ನು ಮೀರಿ ಮಾಡಿದ ಕೆಲಸ ಯಾವುದು?
4. ರಾಮನ್‌ರು ತಮ್ಮ ಶಿಷ್ಯರ ಸಾಧನೆಯನ್ನು ಹೊಗಳುತ್ತಿದ್ದುದರ ಉದ್ದೇಶವೇನು?
5. ಗೋಪಾಲನ ಅಣ್ಣ ಕಾಡಿನಲ್ಲಿ ಏನು ಮಾಡುತ್ತಿರುವನೆಂದು ಅಮ್ಮ ಹೇಳಿದಳು?
6. ಹನ್ನೆರಡು ವರ್ಷಗಳಿಗೊಮ್ಮೆ ಶ್ರವಣಬೆಳಗೊಳದಲ್ಲಿ ನಡೆಯುವ ಉತ್ಸವ ಯಾವುದು?
7. ಸುಗ್ಗಿ ಬಂದಾಗ ಯಾರು ನವ ವಧುವೇ ಆಗುವವಳು ಎಂದು ಕವಿ ತಿಳಿಸಿದ್ದಾರೆ?
8. ಜನಪದರು ಮಗು ಅತ್ತರೆ ಯಾವುದು ಚಿಗುರುತ್ತದೆ ಎಂದಿದ್ದಾರೆ?

**ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **11X2=22**

9. ಗಿಳಿರಾಯನಿಗೆ ಏನಾದರೂ ವರವನ್ನು ಕೊಡಬೇಕೆಂದು ಇಂದ್ರನು ತೀರ್ಮಾನಿಸಿದ್ದೇಕೆ?
10. 'ದ್ರಾವಿಡ' ಎಂಬ ಹೆಸರು ರಾಹುಲ್ ದ್ರಾವಿಡರ ಮನೆತನಕ್ಕೆ ಬರಲು ಕಾರಣವೇನು?

11. ಪುಟ್ಟರಾಜಗವಾಯಿಯವರಿಗೆ ಸಂದಿರುವ ಪ್ರಮುಖ ಪ್ರಶಸ್ತಿಗಳಾವುವು?

12. ಪುಟ್ಟರಾಜಗವಾಯಿಯವರು ಯಾವ ವಿಶೇಷಣಗಳಿಂದ ಪ್ರಸಿದ್ಧರಾಗಿದ್ದರು?

13. ರಾಮನ್‌ರು ತಮ್ಮ ಶಿಷ್ಯ ಪಿಷಾರವರಿಗೆ ನಿನ್ನಲ್ಲಿ ಹತ್ತು ಕಿಲೋವಾಟ್ ಶಕ್ತಿಯ ಬುದ್ಧಿ ಇದೆ ಎಂದು ಹೇಳಿದ್ದೇಕೆ?

14. ಮಗುವಿನ ಯಾವ ಮಾತುಗಳಿಗೆ ಗೊಮ್ಮಟೇಶ ನಕ್ಕು ಬಿಟ್ಟನೆಂದು ಸು.ರಂ.ಎಕ್ಕುಂಡಿಯವರು ಹೇಳಿದ್ದಾರೆ?

15. ಚೈತ್ರದಲ್ಲಾಗುವ ಪ್ರಕೃತಿ ಬದಲಾವಣೆಗಳಾವುವೆಂದು ಬಸವರಾಜ ಸಾದರರವರು ತಿಳಿಸಿದ್ದಾರೆ?

16. ಸದ್ದು ಮಾಡದೆ ಹೇಗೆ ಬಾಳ ಬೇಕೆನ್ನುವುದಕ್ಕೆ ಸಿ.ಪಿ.ಕೆಯವರು ಕೊಟ್ಟಿರುವ ನಿದರ್ಶನಗಳಾವುವು?

17. ತಂದೆಗೆ ಹೆಸರು ತರುವುದರಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳ ನಡುವೆ ಭೇದವಿಲ್ಲವೆನ್ನುವುದು ಮಗು ಪದ್ಯದಲ್ಲಿ ಹೇಗೆ ವ್ಯಕ್ತವಾಗಿದೆ?

18. ಸಾವಿತ್ರಿಯು ತನ್ನ ಗಂಡನಿಗೆ ದೂರವಾಣಿ ಮಾಡಿದ ಸನ್ನಿವೇಶವನ್ನು ತಿಳಿಸಿರಿ.

19. ದೊಡ್ಡ ಹೆಗಡೆಯವರ ಮೊದಲ ಹೆಂಡತಿಯ ಮಗಳು ಜೋಯಿಸರ ಮೈದುನನಿಗೆ ಕೃತಜ್ಞತೆಯನ್ನು ಸೂಚಿಸಿದ್ದೇಕೆ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಾಕ್ಯಗಳಲ್ಲಿ ಬರೆಯಿರಿ. 2X3=6**

20. "ಸಾರ್ಥಕ ಶಿಕ್ಷಕತ್ವದ ಹೆಗ್ಗುರುತು ಇದು"

21. "ಒಂದು ಜೀವನಕೇಕೆ ಹಲವು ಸಾಧ್ಯಗಳು?"

**ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ವಾಕ್ಯಗಳಲ್ಲಿ ಬರೆಯಿರಿ. 2X3=6**

22. ಕುವೆಂಪು

23. ಸುಕನ್ಯಾಮಾರುತಿ

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಮಾಡಿರಿ 1X3=3**

24. ವೇದಾಂತ_______________

________ತಾನಾಗದನ್ನಕ್ಕ______
________ತೋಡಿ__________
______________ಮಲ್ಲಿಕಾರ್ಜುನ

**ಅಥವಾ**

ಮರವಿದ್ದು_________________
______ಫಲವೇನು___________
ಹಸು____________________
_______________ಗುಣವಿಲ್ಲದನ್ನಕ್ಕ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2X4=8**

25. "ಸಹ್ಯಪರ್ವತವೆನಿಸಿದ್ದ ಸಹ್ಯಾದ್ರಿ ಈಗ ಅಸಹ್ಯ ಪರ್ವತವಾಗುತ್ತಿದೆ"–ಕಾರಣಗಳೊಂದಿಗೆ ವಿವರಿಸಿ.

ಅಥವಾ

ನೀವು ಕನ್ನಡ ನಾಡಿನ ಯಾವ ಮೂಲೆಯಲ್ಲಿದ್ದರೂ ಪಶ್ಚಿಮ ಘಟ್ಟಗಳ ಪ್ರಭಾವದಿಂದ ದೂರವಿರಲು ಸಾಧ್ಯವಿಲ್ಲವೆಂದು ಲೇಖಕರು ಹೇಳಲು ಕಾರಣಗಳೇನು? ವಿವರಿಸಿ.

26. ಉತ್ತರಕುಮಾರನ ನಡವಳಿಕೆಗೆ ಅರ್ಜುನನ ಪ್ರತಿಕ್ರಿಯೆಯನ್ನು ಕುಮಾರವ್ಯಾಸನು ಹೇಗೆ ಚಿತ್ರಿಸಿದ್ದಾನೆ? ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

ಅಥವಾ

ಭಯಂಕರವಾದ ಸೈನ್ಯವನ್ನು ಕಾಣುತ್ತಲೇ ಉತ್ತರಕುಮಾರನು ಆಡಿದ ನುಡಿಗಳನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

## ಭಾಗ – 'ಬಿ'

## ಅನ್ವಯಿಕ ವ್ಯಾಕರಣ – 12 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ಕೆಳಗೆ ಕೊಟ್ಟಿರುವ ನಾಲ್ಕು ಪರ್ಯಾಯಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **12X1=12**

**27. 'ಕರುಣೆ' ಪದದ ವಿರುದ್ಧಾರ್ಥಕ ರೂಪ :**

(ಎ) ನಿಷ್ಕರುಣೆ (ಸಿ) ನಿಶ್ಕರುಣೆ

(ಬಿ) ದಯೆ (ಡಿ) ಕಾರುಣ್ಯ

**28. 'ದ್ವಿರುಕ್ತಿ' ಪದಕ್ಕೆ ಉದಾಹರಣೆ ಇದು :**

(ಎ) ಘಮಘಮ (ಸಿ) ಢಣಢಣ

(ಬಿ) ಸರಸರ (ಡಿ) ಬೇಗಬೇಗ

**29. 'ಲಕ್ಷ್ಮೀಶ' ಸಂಧಿ ಬಿಡಿಸಿದ ರೂಪ :**

(ಎ) ಲಕ್ಷ್ಮೀ+ಈಶ (ಸಿ) ಲಕ್ಷ್ಮೀ+ಈಶ್ವರ

(ಬಿ) ಲಕುಮಿ+ಈಶ (ಡಿ) ಲಕ್ಷ್ಮಿ+ಮೀಶ

**30. 'ವಿಸ್ತಾರ' ಪದದ ತದ್ಭವ ರೂಪ :**

(ಎ) ಬಿತ್ತರ (ಸಿ) ವಿಸ್ತರ

(ಬಿ) ಬಿನ್ನಾಣ (ಡಿ) ಬಿತ್ತಾರ

**31. ತತ್ಪುರುಷ ಸಮಾಸಕ್ಕೆ ಉದಾಹರಣೆಯಾಗಿರುವ ಪದ :**

(ಎ) ಅರಮನೆ (ಸಿ) ನಿಟ್ಟೋಟ

(ಬಿ) ವನಜಮುಖಿ (ಡಿ) ಮೈದೋರು

**32. 'ರಾಮನ್ನರ ಶಿಷ್ಯರು ಸದಾ ಪ್ರಯೋಗಾಲಯದಲ್ಲಿ ಸಂಶೋಧನೆಯನ್ನು ಮಾಡುತ್ತಿದ್ದರು.' ಈ ವಾಕ್ಯದಲ್ಲಿ ದ್ವಿತೀಯಾ ವಿಭಕ್ತಿಯನ್ನು ಹೊಂದಿರುವ ಪದ :**

(ಎ) ರಾಮನ್ನರ (ಸಿ) ಪ್ರಯೋಗಲಯದಲ್ಲಿ

(ಬಿ) ಶಿಷ್ಯರು (ಡಿ) ಸಂಶೋಧನೆಯನ್ನು

33. **'ಮಕ್ಕಳ್ಗೆ' ಪದದ ಗ್ರಾಂಥಿಕ ರೂಪ :**

(ಎ) ಮಕ್ಕಳಿಗೆ (ಸಿ) ಮಗಳಿಗೆ

(ಬಿ) ಮಗುವಿಗೆ (ಡಿ) ಮಕ್ಕಳುಗೆ

34. **ಷಟ್ಪದಿಯಲ್ಲಿ ಇರುವ ಸಾಲುಗಳ ಸಂಖ್ಯೆ :**

(ಎ) ನಾಲ್ಕು (ಬಿ) ಮೂರು (ಸಿ) ಆರು (ಡಿ) ಹದಿನಾಲ್ಕು

35. **'ವನಜಮುಖಿ' ಇಲ್ಲಿರುವ ಅಲಂಕಾರ :**

(ಎ) ಉಪಮಾ (ಸಿ) ಯಮಕ

(ಬಿ) ದೃಷ್ಟಾಂತ (ಡಿ) ರೂಪಕ

36. **'ಕೃತಜ್ಞತೆ' ಪದದ ಅರ್ಥ :**

(ಎ) ಉಪಕಾರ ಸ್ಮರಣೆ ಇರುವುದು (ಸಿ) ಉಪಕಾರ ಮಾಡುವುದು

(ಬಿ) ಉಪಕಾರ ಸ್ಮರಣೆ ಇಲ್ಲದಿರುವುದು (ಡಿ) ಉಪಕಾರ ಮಾಡದಿರುವುದು

37. **ವಸ್ತುವಿನ ಬಣ್ಣ, ಸ್ವಭಾವ ಇತ್ಯಾದಿಗಳನ್ನು ತಿಳಿಸುವ ನಾಮಪದಗಳನ್ನು ಹೀಗೆನ್ನುತ್ತಾರೆ :**

(ಎ) ಭಾವನಾಮ (ಸಿ) ಗುಣವಾಚಕ

(ಬಿ) ಸರ್ವನಾಮ (ಡಿ) ಪರಿಮಾಣವಾಚಕ

38. **ಮನುಷ್ಯನ ಸ್ವೇಚ್ಛಾಚಾರ, ಅತಿಯಾದ ಬಯಕೆ ಹಾಗೂ ದುರಾಸೆಗಳಿಂದ ಪ್ರಕೃತಿಯು ಸಹನೆ ಕಳೆದುಕೊಳ್ಳುತ್ತಿದೆ.**

**ಈ ವಾಕ್ಯದಲ್ಲಿರುವ ನುಡಿಗಟ್ಟು :**

(ಎ) ಅತಿಯಾದ ಬಯಕೆ (ಸಿ) ದುರಾಸೆಗಳು

(ಬಿ) ಸಹನೆ ಕಳೆದುಕೊ (ಡಿ) ಸ್ವೇಚ್ಛಾಚಾರ

## ಭಾಗ – 'ಸಿ'

### ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ 15 ಅಂಕಗಳು

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4=4**

ವಿರೋಧಪಕ್ಷದ ಸದಸ್ಯರಾಗಿದ್ದ ಕೆಂಗಲ್ ಹನುಮಂತಯ್ಯನವರು ಒಮ್ಮೆ ನ್ಯಾಯವಿಧಾಯಕ ಸಭೆಯಲ್ಲಿ ಮಂತ್ರಿಗಳು ತಮ್ಮ ಸಂಬಳ ಸವಲತ್ತುಗಳನ್ನು ಕಡಿಮೆ ಮಾಡಿಕೊಳ್ಳಬೇಕೆಂಬ ಮಸೂದೆಯನ್ನು ಮಂಡಿಸಿ ಸರ್ಕಾರಕ್ಕೆ ಇರುಸುಮುರುಸು ಮಾಡಿದರು. ತಮ್ಮ ವಾದಕ್ಕೆ ಪೂರಕವಾಗಿ ಕೆಂಗಲ್ಲರು ಇಂಗ್ಲೆಂಡಿನ ಸಂಸದೀಯ ಪದ್ಧತಿಯ ರೀತಿನೀತಿಗಳು, ಅಲ್ಲಿನ ಮಂತ್ರಿಗಳ ಸಂಬಳಸಾರಿಗೆ ಬಗೆಗೆ ತಿಳಿಸಿ ಸಮರ್ಥವಾಗಿ ಮಾತನಾಡಿ ಎಲ್ಲರ ಪ್ರಶಂಸೆ ಗಳಿಸಿದರು. ಆದರೆ ಮೈಸೂರಿನ ಸನ್ನಿವೇಶದಲ್ಲಿ ಇಂಥ ಕ್ರಮ ಸೂಕ್ತವಲ್ಲವೆಂದು ಸೀತಾರಾಮಶಾಸ್ತ್ರಿಗಳು ಸರ್ಕಾರದ ಪರವಾಗಿ ವಾದವನ್ನು ಮಂಡಿಸಿ ಹನುಮಂತಯ್ಯನವರ ಶ್ರಮವನ್ನು ನೀರಿನಲ್ಲಿ ಕೊಚ್ಚಿಹೋಗುವಂತೆ ಮಾಡಿದರು. ಆ ಕಲಾಪ ಮುಗಿದು ಸದಸ್ಯರೆಲ್ಲಾ ಹೊರಡುವಾಗ ಕೆ. ಚಂಗಲರಾಯ ರೆಡ್ಡಿಯವರು ಎಲ್ಲರಿಗೂ ಕೇಳಿಸುವಂತೆ "ಎಲ್ಲಾ ಹಾಳುಮಾಡಿಬಿಟ್ಟೆ! ಎಂದು ತೆಲುಗಿನಲ್ಲಿ ಗಟ್ಟಿಯಾಗಿ ಶಾಸ್ತ್ರಿಗಳನ್ನು ಬೈದು ಹೊರಗೆ ಹೋದರು.

39. ಸರ್ಕಾರಕ್ಕೆ ಇರುಸುಮುರುಸಾಗಲು ಕಾರಣವೇನು ?

40. ಕೆಂಗಲ್ ಹನುಮಂತಯ್ಯನವರು ಎಲ್ಲರ ಪ್ರಶಂಸೆ ಗಳಿಸಿದುದು ಹೇಗೆ ?

41. ಸರ್ಕಾರದ ಪರವಾಗಿ ವಾದ ಮಾಡಿದವರು ಯಾರು ?

42. ಕೆ. ಚಂಗಲರಾಯ ರೆಡ್ಡಿಯವರು ಏನೆಂದು ಬೈದರು?

43. **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1X3=3**

- ಉಪ್ಪು ತಿಂದ ಮೇಲೆ ನೀರು ಕುಡಿಯಲೇ ಬೇಕು.
- ಹಾಸಿಗೆ ಇದ್ದಷ್ಟು ಕಾಲು ಚಾಚು.
- ಒಗ್ಗಟ್ಟಿನಲ್ಲಿ ಬಲವಿದೆ.

44. ಉಡುಪಿಯ ಸೆಂಟ್ ಮೇರಿ ಮೆಮೋರಿಯಲ್ ಪ್ರೌಢಶಾಲೆಯಲ್ಲಿ ಓದುತ್ತಿರುವ ನೀವು ಪ್ರಿಯಾಂಕ / ಪವನ್‌ಕುಮಾರ್ ಎಂದು ಭಾವಿಸಿ ನಿಮ್ಮ ಶಾಲೆಯಿಂದ ಕೈಗೊಂಡ ಪ್ರವಾಸದ ಅನುಭವವನ್ನು ತಿಳಿಸುತ್ತಾ ನಿಮ್ಮ ಗೆಳೆಯ / ಗೆಳತಿ ಹೃಷಿಕೇಶ್ / ರಚನಗೆ ಒಂದು ಪತ್ರ ಬರೆಯಿರಿ.

**ಅಥವಾ**

ತುಮಕೂರಿನ ಸೋಮೇಶ್ವರ ಬಡಾವಣೆಯ ಸರಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ನೀವು ಸುರೇಶ/ಸುಶೀಲ ಎಂದು ಭಾವಿಸಿ ಜೀವ ವಿಮಾ ಕಂಪನಿಯವರು ಏರ್ಪಡಿಸಿರುವ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಲು ಬೆಂಗಳೂರಿಗೆ ಹೋಗುತ್ತಿರುವುದರಿಂದ ಎರಡು ದಿನ ರಜೆಯನ್ನು ಕೊಡಬೇಕೆಂದು ಕೋರಿ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ರಜಾ ಚೀಟಿಯನ್ನು ಬರೆಯಿರಿ. 1X4=4

45. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. 1X4=4**

- ಸಾರ್ವಜನಿಕ ಗ್ರಂಥಾಲಯ
- ಹವ್ಯಾಸದ ಮಹತ್ವ
- ಸ್ವಚ್ಛತಾ ಆಂದೋಲನ.

*******************